**ಹಿರಿಯ ಶ್ರೇಣಿ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ.**

**CC No. 312/2023**

**PW-2 CW-4**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಗಂಗಪ್ಪ ತಂದೆ ಪಂಪಣ್ಣ |
| ವಯಸ್ಸು | ಃ | 70 ವರ್ಷ |
| ಉದ್ಯೋಗ | ಃ | ಒಕ್ಕಲುತನ |
| ವಾಸಸ್ಥಳ | ಃ | ಮಸೀದಾಪೂರ |
| ಪ್ರಮಾಣಿಕರಿಸಿದ ದಿನಾಂಕ | ಃ | 07-11-2024 |

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ.**

ಚಾಸಾ-1 ನನ್ನ ಮಗಳು. ಚಾಸಾ-5 ನನ್ನ ಹೆಂಡತಿ. ಚಾಸಾ-2, 3 ಮತ್ತು 6 ರಿಂದ 9 ರವರ ಪರಿಚಯ ಇದೆ. 1 ನೇ ಆರೋಪಿ ನನ್ನ ಅಳಿಯ. 2 ಮತ್ತು 3 ನೇ ಆರೋಪಿತರು ನನ್ನ ಬೀಗರು.

ಈಗ ಅಂದಾಜು 04 ವರ್ಷಗಳ ಹಿಂದೆ ಹೊತ್ತು ಮುಳುಗುವ ಸಮಯಕ್ಕೆ ಪೋನ ಮಾಡಿ ಆರೋಪಿತರು ನನಗೆ 5 ಲಕ್ಷ ವರದಕ್ಷಿಣೆ ತೆಗೆದುಕೊಂಡು ಬಾ ಎಂದು ಕಿರುಕುಳ ನೀಡಿ ಹೊಡಿ-ಬಡಿ ಮಾಡುತ್ತಿದ್ದು ಕೊಲೆ ಮಾಡಿ ತಿಪ್ಪೆಯಲ್ಲಿ ಹಾಕುತ್ತೇವೆ ಎಂದು ಪ್ರಾಣ ಬೆದರಿಕೆ ಹಾಕುತ್ತಿದ್ದಾರೆ ಎಂದು ನನ್ನ ಮಗಳು ತಿಳಿಸಿದ್ದರಿಂದ ಮರುದಿನ ಬೆಳಿಗ್ಗೆ ಹೋಗಿ ನನ್ನ ಮಗಳನ್ನು ತವರು ಮನೆಗೆ ಕರೆದುಕೊಂಡು ಬಂದಿರುತ್ತೇನೆ. ನಂತರ 4-5 ದಿನ ಬಿಟ್ಟು ಆರೋಪಿತರು ಮಸೀದಪೂರ ಗ್ರಾಮದಲ್ಲಿರುವ ನಮ್ಮ ಮನೆಗೆ ಬಂದು ನನ್ನ ಮಗಳಿಗೆ 5 ಲಕ್ಷ ಹಣ ತರದೇ ಏಕೆ ಇಲ್ಲೇ ಇರುವಿ ಎಂದು ಸೂಳೆ ಎಂದು ಅವಾಚ್ಯವಾಗಿ ಬೈದು ನಮಗೆ ಹೊಡೆದು ಹೋಗಿರುತ್ತಾರೆ. ನಂತರ ನಾವು ದಿನಾಂಕ 11-08-2020 ರಂದು ಗಬ್ಬೂರು ಪೊಲೀಸ ಠಾಣೆಗೆ ದೂರನ್ನು ನೀಡಿರುತ್ತೇವೆ. ನಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ಪೊಲೀಸರೇ ನಮ್ಮನ್ನು ಅಶೋಕ ರಾಜೋಳಿ ಎಂಬ ಖಾಸಗಿ ವೈದ್ಯರ ಬಳಿ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಆರ್.ಕೆ ವಕೀಲರಿಂದ.**

ನಾನು ಪೊಲೀಸರಿಗೆ ದಿನಾಂಕ 11-08-2020 ರಂದು ಘಟನೆಯಾದ ದಿನ ರಾತ್ರಿ 8-00 ಗಂಟೆಗೆ ಹೇಳಿಕೆಯನ್ನು ನೀಡಿರುತ್ತೇನೆ. ಘಟನೆಯಾಗುವ ಪೂರ್ವದಲ್ಲಿ ಎಷ್ಟು ದಿನಗಳ ಮುಂಚೆ ನನ್ನ ಮಗಳು ನನ್ನ ಮನೆಯಲ್ಲಿ ಇದ್ದಳು ಎಂಬ ಪ್ರಶ್ನೆಗೆ ಸಾಕ್ಷಿಯು ಸದರಿ ಜಗಳವಾದ ನಂತರ ನನ್ನ ಮಗಳನ್ನು ತವರು ಮನೆಗೆ ಕರೆದುಕೊಂಡು ಬಂದಿರುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಆರೋಪಿತರು ನಮ್ಮ ಮನೆಗೆ ಬಂದು ಜಗಳ ಮಾಡುವ ದಿನದಿಂದ ಅಂದಾಜು 4-5 ದಿನಗಳ ಮುಂಚೆ ತವರು ಮನೆಗೆ ಬಂದಿರುತ್ತಾಳೆ. ಘಟನೆಯಾಗುವ 4-5 ದಿನಗಳ ಮುಂಚೆ

ನನ್ನ ಮಗಳನ್ನು ತವರು ಮನೆಗೆ ಕರೆದುಕೊಂಡು ಬಂದಿರುತ್ತೇನೆ ಎಂದು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

"ನನ್ನ ಮಗಳು ಈಗ ಒಂದುವರೆ ವರ್ಷದಿಂದ ನನ್ನ ಮನೆಯಲ್ಲಿಯೇ ಇದ್ದರೂ ಆಕೆಯ ಗಂಡ ಮತ್ತು ಅತ್ತೆ-ಮಾವ ಯಾರು ಕರೆಯಲಿಕ್ಕೆ ಬಂದಿರಲಿಲ್ಲ" ಎಂದು ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಡಿ-1 ಎಂದು ಗುರುತಿಸಲಾಯಿತು. ನನ್ನ ಮಗಳಿಗೆ ಎರಡು ಮಕ್ಕಳು ಆಗುವವರೆಗೆ ಗಂಡನ ಮನೆಯಲ್ಲಿ ಚೆನ್ನಾಗಿದ್ದರು. ನನ್ನ ಮಗಳ ಮಗಳು ಜನಿಸಿ ಈಗ 05 ವರ್ಷ ಮುಗಿದಿರುತ್ತದೆ. ನನ್ನ ಮಗಳಿಗೆ ವರದಕ್ಷಿಣೆ ತರುವಂತೆ ಕಿರುಕುಳ ನೀಡುತ್ತಿದ್ದರಿಂದ ಪಂಚಾಯತಿಯನ್ನು ಮಾಡಿರುತ್ತಿರಾ ಎಂಬ ಪ್ರಶ್ನೆಗೆ ಸಾಕ್ಷಿಯು ಪಂಚಾಯತಿ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಯಾವಾಗ ಪಂಚಾಯತಿ ಮಾಡಿರುತ್ತಿರಿ ಎಂಬ ಪ್ರಶ್ನೆಗೆ ನಿಖರವಾದ ದಿನಾಂಕ, ತಿಂಗಳು ಮತ್ತು ವರ್ಷ ಹೇಳಲು ಬರುವುದಿಲ್ಲ ಮೇಲಿಂದ ಮೇಲೆ ಕಿರುಕುಳ ನೀಡುತ್ತಿದ್ದರಿಂದ ಆಗಾಗ ನನ್ನ ಮಗಳನ್ನು ಕರೆದುಕೊಂಡು ತವರು ಮನೆಗೆ ಬರುತ್ತಿದ್ದೆ ಎಂದು ಹೇಳುತ್ತಾರೆ. ನಮ್ಮ ಗ್ರಾಮದ ಹಿರಿಯರನ್ನು ಕರೆದುಕೊಂಡು ಹೋಗಿ 2-3 ಬಾರಿ ಬುದ್ಧಿವಾದ ಹೇಳಿ ನನ್ನ ಮಗಳನ್ನು ತವರು ಮನೆಗೆ ಕರೆದುಕೊಂಡು ಬಂದಿರುತ್ತೇನೆ. ನನ್ನ ಮಗಳು ತವರು ಮನೆಗೆ ಬಂದ ನಂತರ ಆರೋಪಿತರೇ ಬಂದು ನನ್ನ ಮಗಳನ್ನು ಕರೆದುಕೊಂಡು ಹೋಗಿರುತ್ತಾರೆ. ಆರೋಪಿತರ ಮನೆಯಲ್ಲಿ ವಿಭಾಗ ಆಗುವ ಪೂರ್ವದಲ್ಲಿ 6 ಜನರೂ ಕೂಡಿ ಇದ್ದು ಈಗ 2 ನೇ ಆರೋಪಿತರ ದೊಡ್ಡ ಮಗ ಮತ್ತು ಸೊಸೆ ಬೇರೆ ಆಗಿರುತ್ತಾರೆ. ನನ್ನ ಬೀಗರು ನನ್ನ ಅಳಿಯನೊಂದಿಗೆ ಇರುತ್ತಾರೆ. ನನ್ನ ಮಗಳು ತನ್ನ ಗಂಡನೊಂದಿಗೆ ಬೇರೆ ಮನೆ ಮಾಡು ಎಂದು ವಾದ ಮಾಡುತ್ತಿದ್ದಳು ಎಂದರೆ ಸರಿಯಲ್ಲ. ನಾವು ಬೇರೆ ಮನೆ ಮಾಡಿಸುವಂತೆ ನನ್ನ ಮಗಳಿಗೆ ಪ್ರಚೋದನೆ ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ನನ್ನ ಮಗಳಿಗೆ ಮತ್ತು ನನಗೆ ನನ್ನ ಅಳಿಯ ನಮ್ಮ ತಂದೆ-ತಾಯಿಯೊಂದಿಗೆ ಇರುತ್ತೇವೆ ಎಂದು ಹೇಳಿರುತ್ತಾನೆ ಎಂದರೆ ಸರಿಯಲ್ಲ. ಬೇರೆ ಮನೆ ಮಾಡುವವರೆಗೆ ಬರುವುದಿಲ್ಲ ಎಂದು ತವರು ಮನೆಗೆ ತಾನಾಗಿಯೇ ಹೋಗಿರುತ್ತಾರೆ ಎಂದರೆ ಸರಿಯಲ್ಲ. ಪ್ರಕರಣ ದಾಖಲಿಸಿದರೆ ಬೇರೆ ಮನೆ ಮಾಡುತ್ತಾನೆ ಎಂದು ಈ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಮಗಳು 04 ವರ್ಷದ ಹಿಂದೆ ಆರೋಪಿತರು ವರದಕ್ಷಿಣೆ ತರುವಂತೆ ಹೊಡಿ-ಬಡಿ ಮಾಡಿ ಕಿರುಕುಳ ನೀಡುತ್ತಿದ್ದು ಪ್ರಾಣ ಬೆದರಿಕೆ ಹಾಕುತ್ತಿದ್ದಾರೆ ಎಂದು ಫೋನ್ ಮೂಲಕ ತಿಳಿಸಿರುತ್ತಾಳೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ 4-5 ದಿನಗಳು ಬಿಟ್ಟು ಆರೋಪಿತರು ಮಸೀದಪೂರ ಗ್ರಾಮಕ್ಕೆ ಬಂದು ನಮಗೆ ಹೊಡೆದು ಜಗಳ ತೆಗೆದು, ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಘಟನೆ ಆಗದೇ

ಇದ್ದರೂ ಆರೋಪಿತರಿಗೆ ತೊಂದರೆ ಕೊಡಲು ಸುಳ್ಳು ದೂರನ್ನು ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.